**SC No. 221/2021**
**PW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **221/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅನಿಲ ಪಾಟೀಲ | ಪ್ರಾಸಾ: 1 |
| ತಂದೆಯ ಹೆಸರು | : | ಬೈರು ಪಾಟೀಲ | ಚಾಸಾ: 1 |
| ಪ್ರಾಯ | : | 53 ವರ್ಷ | ದಿನಾಂಕ 05.01.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಪ್ರಿಟಿಂಗ್ ಪ್ರೆಸ್ | |
| ವಾಸಸ್ಥಳ | : | ಗೌಂಡವಾಡ, ಬೆಳಗಾವಿ. | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-4 ರಿಂದ ಚಾಸಾ-9 ಗೊತ್ತು. ನನಗೆ ಆರೋಪಿತರು ಪರಿಚಯ ಇದೆ.

2. ದಿನಾಂಕ 06.06.2021 ರಂದು ಮಧ್ಯಾಹ್ನ 03.00 ಗಂಟೆಗೆ ಒಂದನೇ ಆರೋಪಿಯು ಜಮೀನಿನಲ್ಲಿ ಗೊಬ್ಬರ ಹಾಕುತ್ತಿದ್ದಾಗ, ನಾನು ದೇವಸ್ಥಾನ ಸಮೀಪ ಇರುವುದರಿಂದ ಅಲ್ಲಿ ಗೊಬ್ಬರ ಹಾಕಬೇಡಿ ಎಂದು ಹೇಳಿದ್ದೆನು. ಆ ಸಮಯಕ್ಕೆ ಊರಿನವರು ಸೇರಿದ್ದರು. ಆ ನಂತರ ಸಂಜೆ 06.00 ಗಂಟೆಗೆ ಅಲ್ಲಿ ಜಗಳ ಪ್ರಾರಂಭವಾಯಿತು. ಮೂರನೇ ಆರೋಪಿಯು ಚಾಕುವಿನಿಂದ ಶಂಕರ ಗುರುನಾಥ ನಿಲಜಕರ ಇವನಿಗೆ ಆತನ ಗಂಟಲಿನ ಬಳಿ

ತಿವಿದು ಹಲ್ಲೆ ಮಾಡಿದನು. ನಾನು ಕೇಳಲು ಹೋದಾಗ ಮೂರನೇ ಆರೋಪಿಯು ಅದೇ ಚಾಕುವಿನಿಂದ ನನ್ನ ಬಲಕಪಾಳಕ್ಕೆ ಮತ್ತು ಎಡಗೈಗೆ ತಿವಿದು ಹಲ್ಲೆ ಮಾಡಿದನು. ಬಳಿಕ ಊರ ಜನರು ನನ್ನನ್ನು ಮತ್ತು ಚಾಸಾ-4 ರವರನ್ನು ಬೆಳಗಾವಿಯ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ-4 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ವಿಜಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಾನು ನನಗೆ ಆದ ಗಾಯದ ಬಗ್ಗೆ ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು, ಆಬಳಿಕ ಕಾಕತಿ ಪೋಲಿಸ ಠಾಣೆಗೆ ದೂರು ಕೊಡಲು ಹೋದೆನು. ನನಗೆ ಮತ್ತು ಚಾಸಾ-4 ರವರಿಗೆ ಆರೋಪಿತರು ಹಲ್ಲೆ ಮಾಡುವಾಗ ಸ್ಥಳದಲ್ಲಿ ಬಸವಣ್ಣಿ ಪಾಟೀಲ, ಆಕಾಶ ರಾಟುಕರ, ರಾಜು ಪಾಟೀಲ, ವಿನೋದ ಪಿಂಗಟ ಮತ್ತು ಕೇತನ ಪಾಟೀಲ ಇದ್ದರು. ಅವರು ಜಗಳವನ್ನು ಬಿಡಿಸಿದ್ದರು.

3. ನಾನು ಆರೋಪಿತರಿಗೆ ಆ ಜಾಗದಲ್ಲಿ ಗೊಬ್ಬರ ಹಾಕಬೇಡಿ ಎಂದು ಹೇಳಿದಾಗ, ಆರೋಪಿತರು ನನಗೆ ನೀನು ಯಾರು ಹೇಳೊಕೆ ಎಂದು ಹೇಳಿದ್ದರು. ನಾನು ಕೊಟ್ಟಂತಹ ಫಿರ್ಯಾದಿಯನ್ನು ನಾನು ಗುರುತಿಸುತ್ತಿದ್ದು, ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಗುರುತಿಸಲಾಯಿತು.

4. ನಾನು ಫಿರ್ಯಾದಿ ಕೊಟ್ಟ ಮಾರನೆಯ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರು. ನಾನು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿಕೊಟ್ಟಿದ್ದೆನು. ಪೋಲಿಸರು ಸ್ಥಳಕ್ಕೆ ಬಂದಾಗ ಬಸವಣ್ಣಿ ಪಾಟೀಲ, ಆಕಾಶ ರಾಟುಕರ, ರಾಜು ಪಾಟೀಲ, ವಿನೋದ ಪಿಂಗಟ ಮತ್ತು ಕೇತನ ಪಾಟೀಲ ಇದ್ದರು. ಪೋಲಿಸರು ಬೆಳಿಗ್ಗೆ 09.30 ರಿಂದ 10.30 ಅವಧಿಯಲ್ಲಿ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಸ್ಥಳದಲ್ಲಿದ್ದಂತಹ ಚಾಕುವನ್ನು ಪೋಲಿಸರು ಪಂಚನಾಮೆಯ ಕಾಲಕ್ಕೆ ಜಪ್ತಿ ಮಾಡಿದ್ದರು. ಆ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆ ಪಂಚನಾಮೆಯ ಕಾಲಕ್ಕೆ ಪೋಲಿಸರು ಒಂದು ಪೋಟೊವನ್ನು ತೆಗೆದಿದ್ದರು. ಆ ಪೋಟೊವನ್ನು ನಿಪಿ-3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಪೋಟೊದಲ್ಲಿ ಚಾಸಾ-2, ಚಾಸಾ-3 ಮತ್ತು ನಾನು ಮತ್ತು ಪೋಲಿಸರು ಕಾಣುತ್ತೇವೆ.

5. ಆ ಪಂಚನಾಮೆ ಮುಗಿದ ನಂತರ ನಾನು ಪುನಃ ಕಾಕತಿ ಪೋಲಿಸ ಠಾಣೆಗೆ ಹೋಗಿದ್ದೆನು. ಆಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ಪೋಲಿಸ ಠಾಣೆಯಲ್ಲಿ ಪೋಲಿಸರು ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಆ ಸಮಯದಲ್ಲಿ ಚಾಸಾ-2 ಮತ್ತು ಚಾಸಾ-3 ರವರು ಕೂಡಾ ಪೋಲಿಸ ಠಾಣೆಗೆ ಬಂದಿದ್ದರು. ಆ ನಂತರ ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ.

6. ಪೋಲಿಸರು ನನ್ನನ್ನು ಬೇರೆ ಎಲ್ಲಿಗೂ ಕೂಡಾ ಕರೆದುಕೊಂಡು ಹೋಗಿಲ್ಲ. ಈಗ ನನಗೆ ತೋರಿಸಿದ ಒಂದು ಹೇಳಿಕೆಯ ಮೇಲೆ ನನ್ನ ಸಹಿ ಇದೆ. ಆ ಹೇಳಿಕೆಯನ್ನು ನಿಪಿ-4 ಎಂದು ಮತ್ತು ಸಾಕ್ಷಿಯು ಗುರುತಿಸಿರುವ ಆತನ ಸಹಿಯನ್ನು ನಿಪಿ-4(ಎ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು. ಘಟನೆಯಾದ ಸುಮಾರು ಒಂದು ತಿಂಗಳ ನಂತರ ಬೆಳಗಾವಿಯ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟು, ನಾನು ಆ ಸಹಿಗಳನ್ನು ಮಾಡಿದ್ದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ

7. ಆರೋಪಿತರಿಗೆ ನಾನು ಆ ಜಮೀನಿನಲ್ಲಿ ಗೊಬ್ಬರ ಹಾಕಬೇಡಿ ಎಂದು ಹೇಳಿದಾಗ, ಎಂಟು ಮಂದಿ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದರು ಎನ್ನುವುದು ನಿಜ.

ಈ ಘಟನೆಯ ಕಾಲಕ್ಕೆ 1, 2, 4 ಮತ್ತು 5 ನೇ ಆರೋಪಿತರು ಚಾಸಾ-4 ರವರನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು ಎನ್ನುವುದು ನಿಜ. 6 ನೇ ಆರೋಪಿಯು ಚಾಸಾ-4 ಇವರಿಗೆ ಕಾಲಿನಿಂದ ಒದ್ದಿದ್ದಳು ಎನ್ನುವುದು ನಿಜ. ಎಂಟು ಮಂದಿ ಆರೋಪಿತರು ನನಗೆ ಮತ್ತು ಚಾಸಾ-4 ರವರಿಗೆ ಜೀವದ ಧಮಕಿ ಕೊಟ್ಟಿದ್ದರು ಎನ್ನುವುದು ನಿಜ.

8. ದಿನಾಂಕ 07.06.2021 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಪೋಲಿಸ ಠಾಣೆಗೆ ಘಟನೆಯ ಕಾಲಕ್ಕೆ ಚಾಸಾ-4 ರವರು ಧರಿಸಿದ್ದ ಬಟ್ಟೆಗಳನ್ನು ಪೋಲಿಸ ಠಾಣೆಗೆ ಹಾಜು ಪಡಿಸಿದ್ದೆ ಎನ್ನುವುದು ನಿಜ. ಅದೊಂದು ಕ್ರಿಮ್ ಬಣ್ಣದ ಅರ್ಧ ತೋಳಿನ ಶರ್ಟ ಆಗಿದ್ದು, ಅದನ್ನು ನಾನು ಪೋಲಿಸರಿಗೆ ಕೊಟ್ಟಿದ್ದೆ. ಪೋಲಿಸರು ಅಮಾನತು ಪಡಿಸಿಕೊಂಡಂತಹ ಚಾಕು ಮತ್ತು ಶರ್ಟನ್ನು ನಾನು ಗುರುತಿಸುತ್ತೇನೆ. ಚಾಕುವನ್ನು ಮುಮಾ-1 ಎಂದು ಮತ್ತು ಶರ್ಟನ್ನು ಮುಮಾ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎಸ್.ಕೆ.ಪಿ. ವಕೀಲರಿಂದಃ

9. ನಾನು ಎಸ್ ಎಸ್ ಎಲ್ ಸಿ ವರೆಗೆ ಮರಾಠಿ ಮಾಧ್ಯಮದಲ್ಲಿ ಓದಿರುತ್ತೇನೆ. ಗೌಂಡವಾಡ ಗ್ರಾಮದ ಸರ್ವೆ ನಂಬರ 78 ಮತ್ತು 88 ಒಂದು ವತನ ಜಮೀನು ಎನ್ನುವುದು ನಿಜ. ಆ ಜಮೀನು ಮೊದಲಿನಿಂದಲೂ ಕೇದಾರಿ ಬೈರು ಪಾಟೀಲ ಎನ್ನುವವರ ಹೆಸರಿನಲ್ಲಿತ್ತು ಎನ್ನುವುದು ನಿಜ. ಆ ಜಮೀನು 1952 ನೇ ಸಾಲಿನಿಂದ ಕೇದಾರಿ ಬೈರು ಪಾಟೀಲ ತೀರಿಕೊಳ್ಳುವವರೆಗೆ ಅವರ ಸ್ವಾಧೀನದಲ್ಲಿಯೇ ಇತ್ತು ಎಂದರೆ ಸಾಕ್ಷಿ ಅದು ದೇವಸ್ಥಾನದ ಜಮೀನು ಎಂದು ಹೇಳುತ್ತಾರೆ. ಈ ಜಮೀನುಗಳು ಇನಾಮ ಕಾಯ್ದೆ ಬಂದ ನಂತರ ಸರ್ಕಾರಕ್ಕೆ ಸೇರಿತ್ತು ಎಂದರೆ ಸಾಕ್ಷಿ ಅದು ದೇವಸ್ಥಾನದ ಜಮೀನುಗಳು ಎಂದು ಹೇಳುತ್ತಾರೆ. ಈ ಜಮೀನುಗಳು ಸರ್ಕಾರಕ್ಕೆ ಸೇರಿದ್ದ ಬಗ್ಗೆ ದಾಖಲೆಗಳನ್ನು ನೋಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಈ ಬಗ್ಗೆ ಸಿವಿಲ್ ದಾವೆ ನಡೆಯುತ್ತಿದ್ದೆ ಎನ್ನುತ್ತಾರೆ.

10. 1 ಮತ್ತು 2 ನೇ ಆರೋಪಿತರು ಕೇದಾರಿ ಪಾಟೀಲರವರ ಮಕ್ಕಳು ಎಂದರೆ ಸಾಕ್ಷಿ ನಾನು ಈ ಬಗ್ಗೆ ದಾಖಲೆಗಳನ್ನು ನೋಡಿಲ್ಲ ಎನ್ನುತ್ತಾರೆ. 1 ಮತ್ತು 2 ನೇ ಆರೋಪಿತರ ತಂದೆಯ ಹೆಸರು ಕೇದಾರಿ ಪಾಟೀಲ ಎನ್ನುವುದು ನಿಜ. ಆ ಕೇದಾರಿ ಪಾಟೀಲರವರು ಸರ್ವೆ ನಂಬರ 78 ಮತ್ತು 88 ರ ಸಂರಕ್ಷಿತ ಗೇಣಿದಾರ ಎಂಬುದು ನನಗೆ ಗೊತ್ತಿಲ್ಲ. ಭೂಸುಧಾರಣಾ ಕಾಯ್ದೆ ಜಾರಿಗೆ ಬಂದ ನಂತರ ಆ ಎರಡು ಜಮೀನುಗಳನ್ನು ತನಗೆ ಮಂಜೂರು ಮಾಡಲು ಕೇದಾರಿ ಪಾಟೀಲ ಅರ್ಜಿ ಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ಎರಡು ಜಮೀನುಗಳನ್ನು ಬೆಳಗಾವಿ ಭೂನ್ಯಾಯ ಮಂಡಳಿಯವರು ಕೇದಾರಿ ಪಾಟೀಲ ಅವರಿಗೆ ಮಂಜೂರು ಮಾಡಿದ್ದರು ಎಂದರೆ ಸಾಕ್ಷಿ ಅದು ದೇವಸ್ಥಾನದ ಜಮೀನು ಎನ್ನುತ್ತಾರೆ. ಆ ಬಳಿಕ ಕೇದಾರಿ ಪಾಟೀಲರವರು ಸರ್ಕಾರಕ್ಕೆ ಆ ಜಮೀನಿನ ಕಿಮ್ಮತ್ತು ಹಣವನ್ನು ಚಲನ ಮೂಲಕ ಕಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಬಳಿಕ ಸರ್ಕಾರದವರು ಕೇದಾರಿ ಪಾಟೀಲರವರ ಹೆಸರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಕೇದಾರಿ ಪಾಟೀಲ ತೀರಿಕೊಂಡ ನಂತರ ಅವರ ವಾರಸುದಾರರಾಗಿ 1 ಮತ್ತು 2 ನೇ ಆರೋಪಿತರು ಆ ಜಮೀನಿನ ಮಾಲೀಕತ್ವ ಹೊಂದಿ ಸ್ವಾಧೀನದಲ್ಲಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಆ ಜಮೀನುಗಳ ಉತಾರಗಳನ್ನು ತೆಗೆದು ನೋಡಿಲ್ಲ.

11. ಸರ್ವೆ ನಂಬರ 78 ರ ಜಮೀನು ಊರಿನ ಪಕ್ಕದಲ್ಲಿದೆ ಎಂದರೆ ನಿಜ. ಸರ್ವೆ ನಂಬರ 78 ಮತ್ತು 88 ರ ಆರ್ ಟಿ ಸಿ ಈಗಲೂ ಕೂಡಾ 1 ಮತ್ತು 2 ನೇ ಆರೋಪಿತರ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಈ ಘಟನೆಯಾಗುವ ಮೊದಲು ನಮ್ಮ ಇಬ್ಬರೂ ಪಕ್ಷಗಾರರನ್ನು ಕಾಕತಿ ಪೋಲಿಸರು ಠಾಣೆಗೆ ಕರೆಸಿ ದಾಖಲಾತಿಗಳನ್ನು ಹಾಜರು ಪಡಿಸಲು ಹೇಳಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ಘಟನೆಯ ಮೊದಲು ಈ ಜಮೀನು ದೇವಸ್ಥಾನಕ್ಕೆ ಕೊಡಬೇಕು ಎಂದು ನಾವು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದೆವು

ಎನ್ನುವುದು ನಿಜ. ಈ ಬಗ್ಗೆ ಜಿಲ್ಲಾಧಿಕಾರಿಗಳು ಯಾವುದೇ ವಿಚಾರಣೆ ನಡೆಸಿ ನಮಗೆ ಉತ್ತರವನ್ನು ಕೊಟ್ಟಿಲ್ಲ.

12. ಪೋಲಿಸರು ಮತ್ತು ಜಿಲ್ಲಾಧಿಕಾರಿಗಳು ನಮ್ಮ ಪರವಾಗಿ ಆದೇಶ ಮಾಡಿಲ್ಲ ಎನ್ನುವ ಕಾರಣಕ್ಕಾಗಿ ನಾವು ದಿನಾಂಕ 06.06.2021 ರಂದು ಸಂಜೆ 06.00 ಗಂಟೆಗೆ ಆ ಜಮೀನಿನ ಸ್ವಾಧೀನವನ್ನು ಬಲಾತ್ಕಾರವಾಗಿ ಪಡೆಯಲು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೆವು ಎನ್ನುವುದು ನಿಜವಲ್ಲ. ಆ ಘಟನೆಯಲ್ಲಿ ನಾವು 1, 4, 7 ಮತ್ತು 8 ನೇ ಆರೋಪಿತರ ಮೇಲೆ ಕೊಲೆ ಮಾಡುವ ಉದ್ದೇಶದಿಂದ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿದ್ದೆವು ಎನ್ನುವುದು ನಿಜವಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ನಮ್ಮ ವಿರುದ್ಧ ಪೋಲಿಸ ಪಿರ್ಯಾದಿಯಾಗಿ ಕ್ರಿಮಿನಲ್ ಕೇಸ ದಾಖಲಾಗಿದೆ ಎನ್ನುವುದು ನಿಜ.

13. ಈ ಜಮೀನಿನ ಪಕ್ಕ 6 ನೇ ಆರೋಪಿಗೆ ಸಂಬಂಧಿಸಿದ ಒಂದು ಗಿರಣಿ ಇದೆ ಎನ್ನುವುದು ನಿಜ. ಈ ಘಟನೆಯ ಕಾಲಕ್ಕೆ ನಾವು ಆ ಗಿರಣಿಗೆ ನುಗ್ಗಿ ಅಲ್ಲಿ ಬೆಂಕಿ ಹಚ್ಚಿ ವಾಹನಗಳನ್ನು ಜಕಂ ಮಾಡಿದ್ದೆವು ಎನ್ನುವುದು ಸುಳ್ಳು. ಆ ಬಳಿಕ 1 ನೇ ಆರೋಪಿಯ ಮನೆಗೆ ನುಗ್ಗಿ ಆ ಮನೆಯ ಮುಂದೆ ಇದ್ದ ಎರಡು ವಾಹನಗಳಿಗೆ ಬೆಂಕಿ ಹಚ್ಚಿ ಮನೆಯ ಸಾಮಗ್ರಿಗಳನ್ನು ಜಕಂ ಮಾಡಿದ್ದೆವು ಎನ್ನುವುದು ಸುಳ್ಳು. ಆರೋಪಿತರ ಸಂಬಂಧಿ ಮಲ್ಲಪ್ಪಾ ಪಾಟೀಲರವರ ಮನೆ ಅದೇ ಓಣಿಯಲ್ಲಿರುತ್ತದೆ ಎನ್ನುವುದು ನಿಜ. ಆ ಮಲ್ಲಪ್ಪಾ ಪಾಟೀಲರವರ ಮನೆಗೆ ಕಲ್ಲು ಹೊಡೆದು, ಅವರ ಮನೆಯ ಮುಂದೆ ಇದ್ದ ವಾಹನಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿದ್ದೆವು ಎನ್ನುವುದು ಸುಳ್ಳು.

14. ಆ ಬಳಿಕ ನಾವು 2 ನೇ ಆರೋಪಿಯ ಮನೆಗೆ ಹೋಗಿ ಆತನ ಮನೆಗೆ ಕಲ್ಲು ಹೊಡೆದು, ಆತನ ಮನೆಯ ಮುಂದೆ ಇದ್ದ ವಾಹನಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿದ್ದೆವು

ಎನ್ನುವುದು ಸುಳ್ಳು. ಆ ನಂತರ ನಾವು ಪೋಲಿಸರೊಂದಿಗೆ ಶಾಮೀಲಾಗಿ ಸರ್ವೆ ನಂಬರ 78 ರ ಜಮೀನಿಗೆ ಒಂದು ಬೋರ್ಡ ಹಾಕಿದ್ದೆವು ಎಂದರೆ ಸಾಕ್ಷಿ ಅದು ಮೊದಲಿನಿಂದಲೂ ಇತ್ತು ಎನ್ನುತ್ತಾರೆ. ಆ ಬಳಿಕ ನಾವು ಪೋಲಿಸರೊಂದಿಗೆ ಶಾಮೀಲಾಗಿ ಗಾಯಗೊಂಡಿದ್ದ 4, 7 ಮತ್ತು 8 ನೇ ಆರೋಪಿತರನ್ನು ಬಂಧಿಸಿ, ರಿಮಾಂಡ್ ಮಾಡಿಸಿದ್ದೆವು ಎನ್ನುವುದು ನಿಜವಲ್ಲ. ಆ ಬಳಿಕ ಆರೋಪಿತರು ಪೋಲಿಸ ಅಧಿಕಾರಿಗಳ ವಿರುದ್ದ ಹೈಕೋರ್ಟಗೆ ಅರ್ಜಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಂಧಿಸಿರುವುದಿಲ್ಲ. ಪೋಲಿಸರು ನನಗೆ ನೀರಿಕ್ಷಣಾ ಜಾಮೀನು ಸಿಗುವವರೆಗೆ ಸಹಾಯ ಮಾಡಿದ್ದರು ಎನ್ನುವುದು ನಿಜವಲ್ಲ.

15. ಆರೋಪಿತರು ನಮ್ಮ ವಿರುದ್ಧ ದಾಖಲು ಮಾಡಿರುವ ಕೇಸನಿಂದ ನಮ್ಮನ್ನು ಬಚಾವ್ ಮಾಡಿಸಲು ನಾನು ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿಯನ್ನು ಕೊಟ್ಟಿದ್ದೆ ಎನ್ನುವುದು ನಿಜವಲ್ಲ. ಆರೋಪಿತರು ನನ್ನ ಮೇಲೆ ಮತ್ತು ಚಾಸಾ-4 ರವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎನ್ನುವುದು ನಿಜವಲ್ಲ. ನಾವು ಸ್ವಯಂ ಗಾಯವನ್ನು ಸೃಷ್ಟಿಸಿ ಸುಳ್ಳು ವೈದ್ಯರ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೆವು ಎನ್ನುವುದು ನಿಜವಲ್ಲ.

16. ನಾವು ಆರೋಪಿತರಿಗೆ ಸುಮಾರು 7-8 ಲಕ್ಷ ರೂಪಾಯಿಯಷ್ಟು ನಷ್ಟ ಉಂಟು ಮಾಡಿ ಮತ್ತು ಮಾರಣಾಂತಿಕ ಹಲ್ಲೆ ಮಾಡಿ, ಅದರಿಂದ ತಪ್ಪಿಸಿಕೊಳ್ಳಲು ಇದೊಂದು ಸುಳ್ಳು ಕೇಸ ದಾಖಲು ಮಾಡಿದ್ದೇವೆ ಎನ್ನುವುದು ನಿಜವಲ್ಲ. ಚಾಸಾ-2 ನನ್ನ ಅಣ್ಣನ ಮಗ ಎನ್ನುವುದು ನಿಜ. ಈ ಜಮೀನುಗಳು ದೇವಸ್ಥಾನಕ್ಕೆ ಸೇರಿದ್ದು ಎಂದು ತೋರಿಸಲು ನಾನು ಪೋಲಿಸರಿಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟಿರುವ ದಾಖಲೆ ಎಂದರೆ ಒಂದು ಡೈರಿಯಾಗಿದೆ. ಅದು 1952 ನೇ ಸಾಲಿನ ಡೈರಿಯಾಗಿದೆ. ಆ ಡೈರಿ ಪಡೆದುಕೊಂಡ ಬಗ್ಗೆ

ಪೋಲಿಸರು ನನ್ನ ಹೇಳಿಕೆಯಲ್ಲಿ ಬರೆದಿದ್ದಾರೆಯೇ ಎನ್ನುವುದು ನನಗೆ ಗೊತ್ತಿಲ್ಲ. ನಾನು ಆ ಜಮೀನು ದೇವಸ್ಥಾನಕ್ಕೆ ಸೇರಿದ್ದು ಎಂದು ಸುಳ್ಳು ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿದ್ದೆ ಎನ್ನುವುದು ನಿಜವಲ್ಲ. ಆರೋಪಿತರ ಸ್ವಂತ ಜಮೀನನ್ನು ಕಬಳಿಸಲು ನಾನು ಅವರ ವಿರುದ್ದ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ನಿಜವಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.